ಓ.ಎಸ್. 341/2017
ಪಿ.ಡಬ್ಲ್ಯೂ-1

ದಿನಾಂಕಃ**05.01.2026**

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮತ್ತು ಶ್ರೀ ಕೆ.ವಿ.ಎಸ್.ಕೆ. ಪ್ರತಿವಾದಿ ಪರ ವಕೀಲರ ಒಪ್ಪಿಗೆಯ ಮೇರೆಗೆ ಶ್ರೀ ಪಿ.ಎನ್. ನಾಗಿರೆಡ್ಡಿ ವಕೀಲರನ್ನು ಭಾಷಾಂತರಕಾರರಾಗಿ ನೇಮಕ ಮಾಡಲಾಯಿತು. ಭಾಷಾಂತರಕಾರರಾಗಿ ಪ್ರಮಾಣ ವಚನ ಭೋದಿಸಲಾಯಿತು.

ನಾನು 5 ನೇ ತರಗತಿಯವರೆಗೆ ತೆಲುಗು ಮಾಧ್ಯಮದಲ್ಲಿ ನಂತರ ಕನ್ನಡ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿರುವುದರಿಂದ ನನಗೆ ತೆಲುಗು ಮತ್ತು ಕನ್ನಡ ಭಾಷೆ ಚೆನ್ನಾಗಿ ಬರುತ್ತದೆ. ಆದ್ದರಿಂದ ನಾನು ತೆಲುಗು ಭಾಷೆಯಿಂದ ಕನ್ನಡ ಭಾಷೆಗೆ ಮತ್ತು ಕನ್ನಡ ಭಾಷೆಯಿಂದ ತೆಲುಗು ಭಾಷೆಗೆ ಭಾಷಾಂತರರಿಸಲು ನನಗೆ ಗೊತ್ತಿರುತ್ತದೆ.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ವಿ.ಎಸ್.ಕೆ. ವಕೀಲರಿಂದಃ

ದಾವಾ ಸ್ವತ್ತುಗಳು ಮೂಲತಃ ನನ್ನ ತಾತನ ತಂದೆ ನಾರಾಯಣಪ್ಪನವರಿಗೆ ಸೇರಿದಂತಹ ಆಸ್ತಿಗಳು. ಸದರಿ ನಾರಾಯಣಪ್ಪನವರಿಗೆ ವೆಂಕಟರವಣಪ್ಪ ಮತ್ತು ಚಿನ್ನಆದೆಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ವೆಂಕಟರವಣಪ್ಪ ಮತ್ತು ಚಿನ್ನಆದೆಪ್ಪ ವಿಭಾಗ ಮಾಡಿಕೊಂಡಿದ್ದರು ಎಂದು ಸೂಚಿಸುವುದು ಸರಿಯಲ್ಲ. ವೆಂಕಟರವಣಪ್ಪನವರಿಗೆ ಮರಿಯಮ್ಮ ಮತ್ತು ಆದೆಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಆದರೆ ಗಂಡು ಮಕ್ಕಳು ಇರಲಿಲ್ಲ. ಮರಿಯಮ್ಮ ನಾನು ಹುಟ್ಟುವ ಪೂರ್ವದಲ್ಲಿಯೇ ತೀರಿಕೊಂಡಿರುತ್ತಾರೆ, ಆದೆಮ್ಮ ಸುಮಾರು 25-30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಆದೆಮ್ಮನವರಿಗೆ ಮಕ್ಕಳು ಇರಲಿಲ್ಲ. ಮರಿಯಮ್ಮನವರಿಗೆ ಲಕ್ಷ್ಮಮ್ಮ ಎಂಬ ಹೆಣ್ಣು ಮಗಳು ಇದ್ದರು, ಅವರೂ ಸಹ ತೀರಿಕೊಂಡಿರುತ್ತಾರೆ. ಸದರಿ ಲಕ್ಷ್ಮಮ್ಮನವರಿಗೆ ಮೂರು ಜನ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಇರುತ್ತಾರೆ.

**2.** ನಾರಾಯಣಪ್ಪನ ಮಕ್ಕಳಾದ ವೆಂಕಟರವಣಪ್ಪ ಮತ್ತು ಚಿನ್ನಆದೆಪ್ಪರವರ ಮಧ್ಯೆ 1978 ರ ಪೂರ್ವದಲ್ಲಿಯೇ ವಿಭಾಗ ಆಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ವೆಂಕಟರವಣಪ್ಪ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ 1, 3 ಮತ್ತು 4 ನೇ ಪ್ರತಿವಾದಿಗಳಿಗೆ ದಿನಾಂಕ 04.12.1978 ರಲ್ಲಿ ಮರಣ ಶಾಸನ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮರಣ ಶಾಸನದ ಆಧಾರದ ಮೇರೆಗೆ ದಾವಾ ಸ್ವತ್ತುಗಳ ಖಾತೆ 1, 3 ಮತ್ತು 4 ನೇ ಪ್ರತಿವಾದಿಗಳ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನಮಗೆ ಗೊತ್ತಿರುವುದಿಲ್ಲ, ಅವರು ಇಲ್ಲೇ ಇದ್ದ ಕಾರಣ ಮಾಡಿಸಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತುಗಳ ಖಾತೆ ವಾದಿಯ ಹೆಸರಿಗೆ ವರ್ಗಾವಣೆಯಾಗಿರುವುದನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ.

**3.** ನನಗೆ ಬುದ್ಧಿ ಬಂದಾಗಿನಿಂದಲೂ ನಾವು ವಾದ ಪತ್ರದಲ್ಲಿ ನಮೂದು ಮಾಡಿರುವ ಮಲ್ಲಪಲ್ಲಿ ಗ್ರಾಮದಲ್ಲಿಯೇ ವಾಸವಾಗಿರುತ್ತೇವೆ. ದಾವಾ ಸ್ವತ್ತುಗಳು ಸಂಪೂರ್ಣವಾಗಿ ವೆಂಕಟರವಣಪ್ಪನವರಿಗೆ ಸೇರಿತ್ತು ಎಂದು ಸೂಚಿಸುವುದು ಸರಿಯಲ್ಲ. ಮರಣ ಶಾಸನದ ಆಧಾರದ ಮೇರೆಗೆ 1, 3 ಮತ್ತು 4 ನೇ ಪ್ರತಿವಾದಿಗಳು ಮಾತ್ರ ದಾವಾ ಸ್ವತ್ತುಗಳ ಸ್ವಾಧೀನದಲ್ಲಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**4.** ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳು ವೆಂಕಟರವಣಪ್ಪನವರ ಮಾಲೀಕತ್ವಕ್ಕೆ ಸೇರಿದ್ದರಿಂದ ನಮಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾವು 9 ಜಮೀನುಗಳು ಒಂದು ಮನೆ ಮತ್ತು ನಿವೇಶನಕ್ಕೆ ಸಂಬಂಧಿಸಿದಂತೆ ದಾವೆಯನ್ನು

ಹೂಡಿರುತ್ತೇವೆ. ಎಲ್ಲಾ ದಾವಾ ಸ್ವತ್ತುಗಳ ಸರ್ವೆ ನಂಬರ್ ಮತ್ತು ಚಕ್ಕುಬಂಧಿಯನ್ನು ಹೇಳಲು ಆಗುವುದಿಲ್ಲ.

**5.** ವೆಂಕಟರವಣಪ್ಪ ತಂದೆ ನಾರಾಯಣಪ್ಪರವರು ದಿನಾಂಕ 14.05.1980 ರಲ್ಲಿ ತೀರಿಕೊಂಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ತೀರಿಕೊಂಡಿರುತ್ತಾರೆ ಆದರೆ ದಿನಾಂಕ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸುಮಾರು 40 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ವೆಂಕಟರವಣಪ್ಪ ತೀರಿಕೊಂಡ ನಂತರ 1 , 3 ಮತ್ತು 4 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**6.** ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಪಾಲು ಇಲ್ಲದೇ ಇದ್ದರೂ ಸಹ ದಾವಾ ಸ್ವತ್ತುಗಳನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಮತ್ತು 1, 3 ಮತ್ತು 4 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ